# Halagannad Kavyagala Hosa odu National Level Workshop organized by Kannada Department.

## Day – 1

Function is inaugurated by Dr. Shantinath Dibbad in the presence of Shri. G. S. Darur president of S.V.E. Society, R. S. Yalashetti, V. H. Pawar , Dr. A. D. Tonage Principal, Dr. V. S. Mali (Organiser), Staff , Participants and Students.




Published in Vijay Karnataka News papers and others

# ಕಾವ್ಯಗಳ ಅಧ್ಯಯನ: ಮಾನವೀಯತೆಯೊಂದಿಗೆ ಸಂವಾದ

**ವಿಕ ಸುದ್ದಿಲೋಕ**, ಹಾರೂಗೇರಿ

ಹಳಗನ್ನಡ ಸಾಹಿತ್ಯ ಅಧ್ಯಯನ ಈಗ ಅವಜ್ಞೆಗೆ ಒಳಗಾಗುತ್ತಿದ್ದು, ಅದಕ್ಕಾಗಿ ಆಸಕ್ತ ಯುವಕರ ಪಡೆ ಸಿದ್ಧಪಡಿಸುವ ಅಗತ್ಯವಿದೆ. ಅವರಿಗೆ ಹಳಗನ್ನಡ ಕಾವ್ಯಗಳ ಅಧ್ಯಯನವೆಂದರೆ ಮಾನವೀಯತೆಯೊಂದಿಗಿನ ಸಂವಾದವೆಂದು ಮನದಟ್ಟು ಮಾಡಿಕೊಡಬೇಕು ಎಂದು ಬೆಳಗಾವಿಯ ರಾಣಿಚನ್ನಮ್ಮಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಸಚಿವ ಡಾ.ಶಾಂತಿನಾಥ ದಿಬ್ಬದ ಹೇಳಿದರು.

ಇಲ್ಲಿನ ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಸೋಮವಾರ ಹಮ್ಮಿಕೊಂಡಿದ್ದ ಹಳಗನ್ನಡ ಕಾವ್ಯಗಳ ಹೊಸ ಓದು ಎಂಬ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಪೂರ್ವಗ್ರಹ ಪೀಡಿತರಾಗಿ ಕಾವ್ಯ ಪ್ರವೇಶ ಮಾಡಿದರೆ ರಸಸ್ವಾದ ಸಿಗದು. ಮುಕ್ತ ಭಾವದಿಂದ ಕಾವ್ಯವನ್ನು ಪ್ರವೇಶ ಮಾಡಿದರೆ ರಸಾನುಭವದ ಮೂಲಕ ಮುಕ್ತಿ ಪಡೆಯಬಹುದು. ಪಂಪ, ರನ್ನ ಪೊನ್ನ, ನಾಗವರ್ಮ, ಹರಿಹರ, ಷಡಕ್ಷರದೇವ ಕನ್ನಡದ ಶ್ರೇಷ್ಠ ಕವಿಗಳು. ಕನ್ನಡ ಕವಿಗಳ ಈ ಕಾವ್ಯಗಳ ವಾಚನ ಪರಂಪರೆಯನ್ನು ಮುಂದುವರೆಸಲು ಇಂಥ ಕಮ್ಮಟಗಳ ಅಗತ್ಯವಿದೆ. ಇಂದು ವಿಚಾರ ಸಂಕಿರಣ ಸಮ್ಮೇಳನಗಳಿಗಿಂತ ಕಾವ್ಯಾಭಿರುಚಿ ಮೂಡಿಸುವ ಕಮ್ಮಟಗಳ ಅಗತ್ಯವಿದೆ. ಈ ದಿಸೆಯಲ್ಲಿ ವೃಷಭೇಂದ್ರ ಕಾಲೇಜಿನ ಪ್ರಯತ್ನ ಸ್ತುತ್ಯಾರ್ಹವಾದುದೆಂದು ಶ್ಲಾಘಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಅಧ್ಯಕ್ಷ ಗಿರೀಶ ದರೂರ ಮಾತನಾಡಿ ಈ ಕಮ್ಮಟದಿಂದ ಸ್ಫೂರ್ತಿ ಪಡೆದು ಹಳಗನ್ನಡ ಕಾವ್ಯವಾಚನ ಅಭಿರುಚಿಯನ್ನು ಮೂಡಿಸಿಕೊಂಡಲ್ಲಿ ಕಮ್ಮಟದ ಉದ್ದೇಶ ಸಾರ್ಥಕಗೊಳ್ಳುವುದು. ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವಲ್ಲಿ ಆರಂಭದಿಂದಲೂ ಕಾಲೇಜು ಕಮ್ಮಟ, ಮುಂಚೂಣಿಯಲ್ಲಿದ್ದು, ಅದಕ್ಕೆ ಹಣಕಾಸಿನ ಕೊರತೆ ಇರುವುದಿಲ್ಲ. ಕಾಲೇಜುಗಳ ವಿಶ್ವವಿದ್ಯಾಲಯಗಳಂತೆ ವಿದ್ಯೆಗಳನ್ನು ಸೃಷ್ಟಿಸುವ ಕೇಂದ್ರಗಳಾಗಬೇಕೆಂಬುದು ತಮ್ಮ ಅಪೇಕ್ಷೆಯಾಗಿದೆ. ಯುಜಿಸಿ ಕಡಿಮೆ ಹಣ ನೀಡುತ್ತಿದ್ದರೂ ಇಂಥ ಕಮ್ಮಟಗಳು ಉಪಯುಕ್ತವಾಗುತ್ತಿದ್ದಲ್ಲಿ ಹಣಕಾಸು ಸಂಯೋಗಕ್ಕೆ ತಾವು ಹಿಂದುಮುಂದು ನೋಡುವುದಿಲ್ಲ ಎಂದು ಅವರು ತಿಳಿಸಿದರು.

ಕಾರ್ಯಾಗಾರದ ಸಂಯೋಜಕ ಡಾ.ವಿ. ಎಸ್.ಮಾಳಿ ಪ್ರಾಸ್ತಾವಿಕವಾಗಿ ಮಾತನಾಡುತ್ತ ಕಾವ್ಯ ವಾಚನ, ರಸಗ್ರಹಣ, ಕಾವ್ಯಪರಂಪರೆಯ ಅವಲೋಕನ, ಹಳಗನ್ನಡ ಕಾವ್ಯದ ಹೊಸ ವ್ಯಾಖ್ಯಾನ ಕುರಿತು ಹೊಸ ಆಲೋಚನೆಗಳನ್ನು ಮೂಡಿಸುವ ಉದ್ದೇಶ ಈ ಕಮ್ಮಟದ್ದಾಗಿದೆ. ಈ ಶಿಬಿರವನ್ನು ಕೇವಲ 50 ಶಿಬಿರಾರ್ಥಿಗಳಿಗೆ ಸೀಮಿತಗೊಳಿಸಲಾಗಿದ್ದರೂ 75 ಕ್ಕೂ ಹೆಚ್ಚು ಆಸಕ್ತರು ಆಗಮಿಸಿದ್ದು, ಕಾವ್ಯಾಸಕ್ತಿಯ ನಿದರ್ಶನವೆಂದು ಹೇಳಿದರು.

ಡಾ.ವಿರೇಶ ಬಡಿಗೇರ, ಡಾ.ಸುಬ್ಬಣ್ಣ ರೈ, ಡಾ.ಗುರುಪಾದ ಮರಿಗುದ್ರಿ, ಡಾ. ಎಸ್. ಶಿವಾನಂದ. ಡಾ.ವಿಕ್ರಮ ವಿಸಾಜಿ, ಡಾ.ಸಿ.ಆರ್,ಗುಡಸಿ, ಡಾ.ಐ. ಆರ್.ಕೊಕಟನೂರ, ಪ್ರೊ.ಐ.ಬಿ.ಬಿಳಗಿ, ಮೊದಲಾದ ವಿದ್ವಾಂಸರು ವೇದಿಕೆಯಲ್ಲಿದ್ದರು.

ಬೆಳಗಾವಿ, ವಿಜಯಪೂರ, ಬಾಗಲಕೋಟ, ದಾವಣಗೇರೆ, ಧಾರವಾಡ ಮೊದಲಾದ ಜಿಲ್ಲೆಗಳ ವಿವಿಧ ಕಾಲೇಜುಗಳ ಪ್ರಾಧ್ಯಾಪಕರು ಹಾಗೂ ಉಪನ್ಯಾಸಕರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಪ್ರಾಚಾರ್ಯ ಎ.ಡಿ.ಟೊಣಗೆ ಸ್ವಾಗತಿಸಿದರು. ಪ್ರೊ.ನಾಮದೇವ ಪತ್ತಾರ ಕಾರ್ಯಕ್ರಮ ನಿರೂಪಿಸಿದರು. ಪ್ರೊ.ಪಿ.ಎಸ್. ಮಂಗಾಜೆ ವಂದಿಸಿದರು.



ಹಾರೂಗೇರಿ ವೃಷಭೇಂದ್ರ ಮಹಾವಿದ್ಯಾಲಯದಲ್ಲಿ ನಡೆದ ಹಳಗನ್ನಡ ಕಾವ್ಯಗಳ ಹೊಸ ಓದು ಎಂಬ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಡಾ.ಶಾಂತಿನಾಥ ದಿಬ್ಬದ ಪುಸ್ತಕ ತೆರೆಯುವುದರ ಮೂಲಕ ಉದ್ಘಾಟಿಸಿದರು.